

ಪ್ರದೀಪ ಕೆಂಜಿಗೆ

# ಇರುವೆ

ಬೆಳಗಿನ ಝಾವ; ಪಾಪು ಮತ್ತು ಅವನ ತಂಗಿ, ಅಂಗಳದಲ್ಲಿ ಕುಕ್ಕುರಗಾಲಿನಲ್ಲಿ ಕುಳಿತು, ತನ್ಮಯರಾಗಿ ನೋಡುತ್ತಿದ್ದರು. ಗಾಳಿ ಇರುವೆಗಳ ಗುಂಪೊಂದು, ಹಿಂಡನಗಲಿ ದಿಕ್ಕುಗೆಟ್ಟಂತೆ ನಿಂತಿತ್ತು. ದೂರ ನೋಟಕ್ಕೆ ಗುಂಪು ನಿಶ್ಚಲವಾಗಿರುವಂತೆ ಕಂಡರೂ ಹತ್ತಿರದಿಂದ ಪ್ರತಿ ಇರುವೆಯೂ ಗಡಿಬಿಡಿಯಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಓಡಾಟುತ್ತಾ, ಒಂದಕ್ಕೊಂದು ಡಿಕ್ಕಿ ಹೊಡೆದಂತೆ, ಸನಿಹಕ್ಕೆ ಸರಿದು ಗುಟ್ಟು ಹೇಳಿದಂತೆ, ಮುತ್ತಿಟ್ಟಂತೆ ಕಾಣುತ್ತಿತ್ತು. ಕೆಲವು, ಪುಟ್ಟಪುಟ್ಟ ಬಿಳಿ ಮೊಟ್ಟೆಗಳನ್ನು ಎದೆಗವಚಿಕೊಂಡು ಓಡಾಡುತ್ತಿದ್ದವು.

ಕಣದ ಅತ್ತ ಕಡೆಯಿಂದ ಕೆಮ್ಮಿದ ಸದ್ದು. ತಿರುಗಿದ ಪಾಪುಗೆ, ಬಿದಿರಿನ ಉನಗಲು ಸರಿಸಿಕೊಂಡು ಒಳಕಾಲಿಡುತ್ತಿದ್ದ ಅಪ್ಪುಕುಟ್ಟ ಮತ್ತು ಅವನ ಹಿಂದೆ, ಅನತಿ ದೂರದಲ್ಲಿ ಬಾಬು ಮೇಸ್ತ್ರಿ ಬರುತ್ತಿರುವುದು ಕಾಣಿಸಿ, ಉತ್ಸಾಹದಿಂದ ಜಿಗಿದು ನಿಂತ. ಆತ ಬಹು ದಿನಗಳಿಂದ ಇದಕ್ಕಾಗಿ ಕಾಯುತ್ತಿದ್ದ.

ಅಪ್ಪುಕುಟ್ಟನ ದೆಸೆಯಿಂದ, ಹೋದ ತಿಂಗಳು ಕೂಲಿ ಬಿಡಾರದಲ್ಲಿ ಹಾಗೂ ತಮ್ಮ ಮನೆಯಲ್ಲಿ ನಡೆದ ರಾದ್ಧಾಂತ ಅವನ ಕಣ್ಣ ಮುಂದೆ ಹಾದು ಹೋಯಿತು.

ಹೆಂಡತಿಯನ್ನು ಬಿಟ್ಟಿದ್ದ ಆಪ್ಪುಕುಟ್ಟ, ಒಂದು ರಾತ್ರಿ ಪಕ್ಕದ ಬಿಡಾರ ಹೊಕ್ಕಿದ್ದ. ಈಗಾಗಲೇ ಇವನ ಉಪಟಳದಿಂದ ರೋಸಿ ಹೋಗಿದ್ದ ಇತರ ಕೆಲಸಗಾರರು, ಒಂದಾಗಿ ಇವನ ಬುರುಡೆ ಬಿಚ್ಚಲು ಹೊರಟಾಗ, ಬಾಬುಮೇಸ್ತ್ರಿ ಮಧ್ಯೆ ಪ್ರವೇಶಿಸಿ ತಡೆಯಲು ಯತ್ನಿಸಿದ್ದ. ಇದರಿಂದ ಇನ್ನೂ ಕೋಪಗೊಂಡ ಗಂಡಸರು ಅದೇ ರಾತ್ರಿ ಅಪ್ಪನ ಬಳಿ ಬಂದು, ತಾವೆಲ್ಲಾ ಈಗಲೇ ಗಂಟುಮೂಟೆ ಕಟ್ಟಿಕೊಂಡು ಬೇರೆ ತೋಟಕ್ಕೆ ಹೊರಡುತ್ತೇವೆ ಎಂದು ಕ್ಯಾತೆ ತೆಗೆದಿದ್ದರು. ಗಾಬರಿಬಿದ್ದ ಅಪ್ಪ, ಬಾಬು ಮೇಸ್ತ್ರಿಯ ಮೇಲೆ ರೇಗಿ, ''ಆ ಸೂಳೇ ಮಗ ಅಪ್ಪುಕುಟ್ಟನ್ನ ಎಳ್ಕಂಡು ಬಾ, ಅಂಡು ಪುಡಿ ಮಾಡುತ್ತೇನೆ'' ಎಂದು ಅಬ್ಬರಿಸಿದ್ದರು.